

# ಮಳೆಗಾಲದ ಮದುವಣಗಿತ್ತಿಯರು!

ಮಳೆಯ ಸ್ಪರ್ಶದಿಂದ ಮಲೆನಾಡಿನ ಎಲ್ಲೆಡೆ ಹಸಿರು. ಗಮನಿಸಿ ನೋಡಿ, ಹಸಿರು ಉಸಿರಾಡಿದಂತೆ ಎಲ್ಲೆಲ್ಲೂ ಚಿಟ್ಟೆಗಳ ದಂಡು.

■ ನಾಗರಾಜ ಎಂ. ಹುಡೇದ





ಪ್ರಸಕ್ತ ಮಳೆಯ ಆರ್ಭಟದ ಜೋರು ಹಾಗೂ ಪ್ರವಾಹದ ಏರು ಮಲೆನಾಡಿನ ಚಿತ್ರಗಳನ್ನೇ ಬದಲಿಸಿದೆ. ಈ ಸಲದ ಮಳೆ ಇಪ್ಪತ್ತು ಮೂವತ್ತು ವರ್ಷಗಳ ಹಿಂದಿನ ಮಳೆಯನ್ನು ನೆನಪಿಸಿತೆನ್ನುವುದು ಹಿರಿಯರ ಮಾತು. ಮಳೆಯ ಅಡ್ಡ ಪರಿಣಾಮಗಳೇನೇ ಇರಲಿ, ವರ್ಷಧಾರೆಯಿಂದ ಮಲೆನಾಡಿನ ಹಸಿರಿಗೆ ಜೀವಕಳೆ ಬಂದಿದೆ. ಆ ಹಸಿರಿಗೆ ಕುಸುರಿಯಿಟ್ಟಂತೆ ಕಾಣಿಸುತ್ತಿರುವುದು ಚಿತ್ತಾಪಹಾರಿ ಚಿತ್ತಾರಗಳ ಚಿಟ್ಟೆಗಳು.

ಬಣ್ಣ ಬಣ್ಣದ ಅಂಗಿ ತೊಟ್ಟು ಹೂವಿಂದ ಹೂವಿಗೆ ಹಾರುವ ಚಿತ್ತಾಕರ್ಷಕ ಚಿಟ್ಟೆಗಳು ಸೂಜಿಗಲ್ಲಿನಂತೆ ಸೆಳೆದು, ತಡೆದು ನಿಲ್ಲಿಸುತ್ತವೆ. ಕುಳಿತಲ್ಲಿ ಕೂರದ, ಹೂವಿಂದ ಹೂವಿಗೆ ಹಾರುವ ಚಿಟ್ಟೆಗಳದು ಚಂಚಲಚಿತ್ತ. ಹಸಿರುಗಿಡ, ಹೂವುಗಳ ಮೇಲೆ ದಣಿವಾರಿಸಿಕೊಂಡಂತೆ ಸ್ವಲ್ಪ ಸ್ವಲ್ಪ ಕುಳಿತು ಮತ್ತೆ ಹಾಡುತ್ತಾ ಹಾರುತ್ತವೆ.

ಗುಂಪು ಗುಂಪಾಗಿ ಹಾರುವ ಚಿಟ್ಟೆಗಳ ಸೊಬಗನ್ನು ನೋಡುವುದೇ ಕಣ್ಣಿಗೆ ಹಬ್ಬ. ಅವು ದಿಬ್ಬಣಕ್ಕೆ ಹೊರಟಂತೆ ಭಾಸವಾಗುತ್ತದೆ. ಚಿಟ್ಟೆಗಳಲ್ಲಿ ಎಷ್ಟೊಂದು ವೈವಿಧ್ಯಮಯ ಬಣ್ಣಗಳು, ಗಾತ್ರ, ವಿನ್ಯಾಸ. ಡೆನಡ್ ಎಗ್ ಪ್ಲೈ, ಸದರ್ನ ಬರ್ಡ್ ವಿಂಗ್ (ನಮ್ಮ ರಾಜ್ಯದ ಚಿಟ್ಟೆ ಮತ್ತು ದೇಶದ ದೊಡ್ಡ ಚಿಟ್ಟೆ ಎನಿಸಿದೆ), ಮೊನಾರ್ಕ್, ಕ್ಯಾಬೇಜ್ ವೈಟ್, ಲೆಮನ್, ಮತ್ತು ನವಿಲು ಹೂ ಚಿಟ್ಟೆಗಳು ಯಲ್ಲಾಪುರ ತಾಲ್ಲೂಕಿನ ಬೈಲಂದೂರು ಗೌಳಿವಾಡದಲ್ಲಿ ನನಗೆ ಕಾಣಸಿಕ್ಕವು.

ಮಕ್ಕಳಿಗಂತೂ ಚಿಟ್ಟೆಗಳನ್ನು ಕಂಡರೆ ತುಂಬಾ ಇಷ್ಟ. ಹಾರುವ ಚಿಟ್ಟೆಗಳ ಬೆನ್ನುಬೀಳುವ ಚಿಣ್ಣರು ಅವುಗಳನ್ನು ಹಿಡಿಯಲೆತ್ನಿಸುತ್ತಾರೆ, ಆ ಆಟದಲ್ಲಿ ಆನಂದಿಸುತ್ತಾರೆ. ಜನಜೀವನ ಮುರಿದ ಬದುಕನ್ನು ಕಟ್ಟಿಕೊಳ್ಳಲು ಹೆಣಗುತ್ತಿದ್ದರೆ, ಅದರ ಪರಿವೇ ಇಲ್ಲದಂತೆ ಚಿಟ್ಟೆಗಳ ಸೌಂದರ್ಯ ಮೆರವಣಿಗೆ ಸಾಗಿದೆ.

■

